ಪಿಡಬ್ಲ್ಯು-1
ಓ ಎಸ್ 85/2018

ದಿನಾಂಕಃ 06-01-2022 ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.-

ಪಾಟೀ ಸವಾಲುಃ ಶ್ರೀ ಪಿ ಟಿ ಪ್ರತಿವಾದಿಗಳ ಪರ ವಕೀಲರಿಂದಃ ಗಿರಿಯಮ್ಮ ಅಂದರೆ 7 ನೇ ಪ್ರತಿವಾದಿ ನನ್ನ ಅತ್ತೆ. 8 ನೇ ಪ್ರತಿವಾದಿ ಕರಿಯಪ್ಪ ನನ್ನ ಮೈದುನ. ಗಿರಿಯಮ್ಮನಿಗೆ ಇಬ್ಬರು ಮಕ್ಕಳು. ನಾನು ಮತ್ತು ಅವರು ಒಂದೇ ಕುಟುಂಬದಲ್ಲಿ ಒಟ್ಟಾಗಿ ವಾಸಿಸುತ್ತಿದ್ದೇವೆ. ನಾವು ಪಾಲು ವಿಭಾಗವಾಗಿಲ್ಲ. ರಾಷ್ಟ್ರೀಯ ಹೆದ್ದಾರಿಗೆ ನನ್ನ ಮನೆ ಹೋಗಿದ್ದು ಆ ಮನೆಗೆ ಪರಿಹಾರ ಪಡೆದಿರುತ್ತೇನೆ ಅಂದರೆ ಸರಿ, ಆ ಮನೆಯನ್ನು ನಾನು ಕಟ್ಟಿಸಿದ್ದೆನು. ಪಾಲು ವಿಭಾಗದಲ್ಲಿ ನನ್ನ ಗಂಡನ ಭಾಗಕ್ಕೆ ಬಂದ ಆಸ್ತಿಗಳನ್ನು ನಾನು ಸಾಗುವಳಿ ಮಾಡುತ್ತಿದ್ದು ಪ್ರತಿವಾದಿಗಳು ಅವರ ಭಾಗದ ಆಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದಾರೆ ಅಂದರೆ ಸರಿಯಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿಯೇ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲಾಗಿದೆ ಅಂದರೆ ಸರಿಯಲ್ಲ. ಆ ಜಮೀನಿನಲ್ಲಿ ಮೆಕ್ಕೆಜೋಳ ಮತ್ತು ಶೇಂಗಾ ಹಾಕಿದ್ದೇವೆ ಅಂದರೆ ಸರಿ. ಈ ನ್ಯಾಯಾಲಯದಲ್ಲಿ ಗಿರಿಯಮ್ಮ, ಕರಿಯಪ್ಪ ಮತ್ತು ನಾಗಮ್ಮ ಇವರ ವಿರುದ್ಧ ಖಾಸಗಿ ದೂರು ಸಲಿಸಿದ್ದೆನೆ ಅಂದರೆ ಸರಿ. ನಾನು ಮದುವೆಯಾದಾಗಿನಿಂದಲೂ ಗಿರಿಯಮ್ಮನನ್ನು ಚೆನ್ನಾಗಿ ನೋಡಿಕೊಂಡಿರುವುದಿಲ್ಲ ಮತ್ತು ಜಂಟಿ ಕುಟುಂಬದಲ್ಲಿ ಇಲ್ಲ ಅಂದರೆ ಸರಿಯಲ್ಲ.

2. ಗಿರಿಯಮ್ಮ ತನ್ನ ಭಾಗಕ್ಕೆ ಬಂದ ಆಸ್ತಿಗಳನ್ನು 5 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿದ್ದಾರೆ ಅಂದರೆ ಅದನ್ನು ಸೃಷ್ಟಿ ಮಾಡಿದ್ದಾರೆ. ದಾನ ಪತ್ರದ ಆಧಾರದ ಮೇಲೆ ನಾನು ನೀಡಿದ್ದ ತಕರಾರನ್ನು ತಳ್ಳಿಹಾಕಿ 5 ನೇ ಪ್ರತಿವಾದಿಯ ಹೆಸರಿಗೆ ಮ್ಯುಟೇಷನ ಅಂಗೀಕಾರ ಆಗಿರುತ್ತದೆ ಅಂದರೆ ಸರಿಯಲ್ಲ. ಈಗಾಗಲೇ ಪಾಲು ವಿಭಾಗವಾಗಿದ್ದು ನಾನು ಆಸ್ತಿಗಳನ್ನು ಪಡೆದುಕೊಂಡಿದ್ದರೂ ಸಹ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ಕುಟುಂಬದ ಅಸ್ತಿಗಳಲ್ಲಿ ನನ್ನ ಪತಿ, ಕರಿಯಪ್ಪ ಮತ್ತು ಗಿರಿಯಮ್ಮನಿಗೆ ತಲಾ 1 ಭಾಗ ಬಂದಿರುತ್ತದೆ ಅಂದರೆ ಸುಳ್ಳು. ಅವರವರ ಭಾಗಕ್ಕೆ ಬಂದ ಆಸ್ತಿಗಳನ್ನು ಅವರವರು ಅನುಭವಿಸುತ್ತಿದ್ದಾರೆ ಅಂದರೆ ಸುಳ್ಳು.

**ಪಿಡಬ್ಲ್ಯೂ-1**
ಓ ಎಸ್ 85/2018

ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಖಾಸಗಿ ದೂರು, ಕಂದಾಯ ಅಧಿಕಾರಿಗಳ ಮಂದೆ ದೂರು ಮತ್ತು ಈ ದಾವೆಯನ್ನು ದಾಖಲಿಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**ಹಿಂ.ಸಿ.ಜೆ. ಮತ್ತು ಜೆಎಂಎಫ್‌ಸಿ.,**
**ಕೂಡ್ಲಿಗಿ.**